ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 460(512)
ಸದಸ್ಯರ ಹೆಸರು	: ಶ್ರೀ. ಬಿ. ಜಿ. ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	: 09-03-2020
ಉತ್ತರಿಸುವ ಸಚಿವರು	: ಮಾನ್ಯ ಉಪ ಮುಖ್ಯ ಮಂತ್ರಿಗಳು.

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪಟಾಪ್‌ಗಳನ್ನು ವಿತರಿಸಲಾಗಿದೆಯೇ; ವಿತರಿಸಿದ್ದಲ್ಲಿ; ಇದುವರೆಗೂ ಎಷ್ಟು ವಿದ್ಯಾರ್ಥಿಗಳಿಗೆ ಲ್ಯಾಪಟಾಪ್‌ಗಳನ್ನು ವಿತರಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು)	ಕಲಬುರಗಿ ಜಿಲ್ಲೆಯಲ್ಲಿ 7 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ 2019-20ನೇ ಸಾಲಿನಲ್ಲಿ ಪ್ರಥಮ ವರ್ಷದ ಪದವಿಗೆ ಪ್ರವೇಶಾತಿ ಪಡೆದಿರುವ 4040 ವಿದ್ಯಾರ್ಥಿಗಳಿಗೆ ಹಾಗೂ ಯಾದಗಿರಿ ಜಿಲ್ಲೆಯಲ್ಲಿ 4 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2019-20ನೇ ಸಾಲಿನಲ್ಲಿ ಪ್ರಥಮ ವರ್ಷದ ಪದವಿಗೆ ಪ್ರವೇಶಾತಿ ಪಡೆದಿರುವ 1,935 ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪಟಾಪ್ ಅನ್ನು ಒದಗಿಸಲಾಗಿದೆ. (ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ) ಒಟ್ಟು 109916 ಲ್ಯಾಪ್ ಟಾಪ್‌ಗಳನ್ನು ಖರೀದಿಸಲು ಸರಬರಾಜುದಾರರಿಗೆ ಖರೀದಿ ಆದೇಶ ನೀಡಲಾಗಿದ್ದು, ಆ ಸಂದರ್ಭದಲ್ಲಿ 2019-20ನೇ ಸಾಲಿನ ವಿದ್ಯಾರ್ಥಿಗಳ ಪ್ರವೇಶಾತಿ ಪ್ರಕ್ರಿಯೆ ಪೂರ್ಣಗೊಂಡಿಲ್ಲದ ಕಾರಣ ಅಗತ್ಯವಾದ ಲ್ಯಾಪ್‌ಟಾಪಗಳ ಸಂಖ್ಯೆಯ ನಿಖರ ಮಾಹಿತಿ ಲಭ್ಯವಾಗಿರುವುದಿಲ್ಲ. ಕಲಬುರಗಿ ವಿಭಾಗ (ಲಾಟ್-4) ಕ್ಕೆ ಒಟ್ಟು 15830 ಲ್ಯಾಪ್‌ಟಾಪ್ ಗಳ ಅವಶ್ಯಕತೆ ಇದೆ ಎಂದು ಅಂದಾಜು ಮಾಡಲಾಗಿತ್ತು. ತದನಂತರಲ್ಲಿ ಕಾಲೇಜುಗಳಿಂದ ಮಾಹಿತಿಯನ್ನು ಪಡೆಯಲಾಗಿದ್ದು, ಕಲಬುರಗಿ ವಿಭಾಗಕ್ಕೆ ಒಟ್ಟು 23877 ಲ್ಯಾಪ್‌ಟಾಪಗಳ ಅವಶ್ಯಕತೆ ಇದೆ ಎಂಬ ಅಂಶ ಕಂಡುಬಂದಿರುತ್ತದೆ. ಲಾಟ್ -1 ರ ಸರಬರಾಜುದಾರರಿಗೆ ಸದರಿ ಲಾಟ್ ನಲ್ಲಿ ಸರಬರಾಜು ಆದೇಶಕ್ಕಿಂತ ಕಡಿಮೆ ಅವಶ್ಯಕತೆ ಕಂಡುಬಂದ ಕಾರಣ ಸದರಿ ಸರಬುರಾಜುದಾರರಿಗೆ 3091 ಲ್ಯಾಪ್‌ಟಾಪ್‌ಗಳನ್ನು ಲಾಟ್-4 ಕಲಬುರಗಿ ವಿಭಾಗಕ್ಕೆ ಸರಬರಾಜು ಮಾಡುವಂತೆ ಸೂಚಿಸಲಾಯಿತು. ಈ ಪ್ರಕಾರವಾಗಿ ಸರಿದೂಗಿಸಿದ ನಂತರದಲ್ಲಿಯೂ ಕೂಡ ಕಲಬುರಗಿ ವಿಭಾಗ ಲಾಟ್-4ಗೆ ಸರಬರಾಜು ಆದೇಶಕ್ಕಿಂತ 5755 ಹೆಚ್ಚುವರಿ ಲ್ಯಾಪ್‌ಟಾಪ್‌ಗಳ ಅವ್ಯಕತೆ ಇದ್ದು, ಕಲಬುರಗಿ ಜಿಲ್ಲೆಯಲ್ಲಿ 09 ಕಾಲೇಜುಗಳಲ್ಲಿ

		952 ವಿದ್ಯಾರ್ಥಿಗಳಿಗೆ ಹಾಗೂ ಯಾದಗಿರಿ ಜಿಲ್ಲೆಯಲ್ಲಿ 04 ಕಾಲೇಜುಗಳಲ್ಲಿ 523 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಸರಬರಾಜು ಮಾಡುವುದು ಬಾಕಿ ಇರುತ್ತದೆ(ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ),ಈ ಸಂಬಂಧ ಪ್ರಕ್ರಿಯೆ ಜಾರಿಯಲ್ಲಿದೆ.
ಆ)	ಉಚಿತ ಲ್ಯಾಪ್‌ಟಾಪ್‌ಗಳನ್ನು ಯಾವ ಯಾವ ಸಮುದಾಯದ ವಿದ್ಯಾರ್ಥಿಗಳಿಗೆ ನೀಡಲಾಗಿದೆ; (ವಿವರ ನೀಡುವುದು)	2019-20ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಥಮ ಪದವಿ ತರಗತಿಗಳಿಗೆ ಪ್ರವೇಶಾತಿ ಪಡೆದಿರುವ ಹಾಗೂ ಕೌಂಟುಂಬಿಕ ವಾರ್ಷಿಕ ಆದಾಯ 2.5 ಲಕ್ಷಗಳಿಂತ ಕಡಿಮೆ ಇರುವ ಎಲ್ಲಾ ಸಮುದಾಯದ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್‌ಗಳನ್ನು ನೀಡಲು ಕ್ರಮ ಕೈಗೋಳ್ಳಲಾಗಿದೆ.
ಇ)	ಯಾವ ಮಾನದಂಡದ ಆಧಾರದ ಮೇಲೆ ಉಚಿತ ಲ್ಯಾಪ್‌ಟಾಪ್‌ಗಳನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ? (ವಿವರ ನೀಡುವುದು)	

ಸಂಖ್ಯೆ: ಇಡಿ 01 ಇಜಿಓವಿ2020

(ಡಾ.ಸಿ.ಎನ್. ಅಶ್ವಥನಾರಾಯಣ)

ಮಾನ್ಯ ಉಪ ಮುಖ್ಯ ಮಂತ್ರಿಗಳು

ಉನ್ನತ ಶಿಕ್ಷಣ,ಮಾಹಿತಿ ತಂತ್ರಜ್ಞಾನ,ಜೈವಿಕ ತಂತ್ರಜ್ಞಾನ,ವಿಜ್ಞಾನ ಮತ್ತು ತಂತ್ರಜ್ಞಾನ,ಕೌಶಲ್ಯಾಭಿವೃದ್ಧಿ,ಉದ್ಯಮ ಶೀಲತೆ ಹಾಗೂ ಜೀವನೋಪಾಯ ಇಲಾಖೆ